5. ಹಾವೇರಿ ಜಿಲ್ಲಾ ಕ್ರೀಡಾಂಗಣ 65.00
6. ಗದಗ್ ಜಿಲ್ಲಾ ಕ್ರೀಡಾಂಗಣ 91.80

ಈ) ಸೂಕ್ತ ನಿವೇಶನ ದೊರಕಿದ ನಂತರ.

ಭೂಮಿ ಯೋಜನೆಯನ್ನು ಹೋಬಳಿ ಮಟ್ಟದಲ್ಲಿ ಅನುಷ್ಠಾನಗೊಳಿಸುವುದು

2454 (2707) : ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ಇಲಾಖೆಯ "ಭೂಮಿ" ಯೋಜನೆಯನ್ನು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸಿದಂತೆ, ಹೋಬಳಿ ಮಟ್ಟದಲ್ಲೂ ಅನುಷ್ಠಾನಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಹೌದಾದಲ್ಲಿ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಕಿಕೊಂಡ ಕಾಲಮಿತಿಯೇನು;

ಇ) ಇದಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಸರ್ಕಾರವು ಈ ಯೋಜನೆಯನ್ನು ಈಗಾಗಲೇ ಹೋಬಳಿ ಮಟ್ಟದಲ್ಲಿಯೂ ಖಾಸಗಿಯವರ ಸಹ ಭಾಗಿತ್ವದೊಂದಿಗೆ ವಿಕೇಂದ್ರೀಕರಣ ಗೊಳಿಸಲಾಗಿದೆ.

ಆ) ದಿನಾಂಕ 4.7.2003ರಂದು ಈ ಬಗ್ಗೆ ಸರ್ಕಾರಿ ಆದೇಶವನ್ನು ಈಗಾಗಲೇ ಹೊರಡಿಸಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿನ ಖಾಸಗಿ ಕಿಯಾಸ್ಕ ಮಾಲೀಕರು ಸಂಪರ್ಕ ಕಲ್ಪಿಸುವಂತೆ ಕೋರಿದಾಗ ಸಾರ್ವಜನಿಕರ ಸೇವೆಗಾಗಿ ಸಂಪರ್ಕವನ್ನು ಕಲ್ಪಿಸಲಾಗುವುದು. ರೈತಮಿತ್ರ ಕೇಂದ್ರಗಳ ಮೂಲಕ ಭೂ ದಾಖಲೆಗಳನ್ನು ಗ್ರಾಮದ ಮಟ್ಟದಲ್ಲಿ ವಿತರಿಸಲಾಗುವುದು.

ಇ) ಸಾರ್ವಜನಿಕರ ಸಹ ಭಾಗಿತ್ವದ ಯೋಜನೆಯೊಂದಿಗೆ ವಿಕೇಂದ್ರೀಕರಣಗೊಳಿಸಿ ಸರ್ಕಾರಕ್ಕೆ ವೆಚ್ಚ ತಗಲದ ರೀತಿಯಲ್ಲಿ ಡಾಟಾ ಸೆಂಟರ್‌ಗಳನ್ನು ಸ್ಥಾಪಿಸಲಾಗುವುದು. ಈ ಡಾಟಾ ಸೆಂಟರನ್ನು ಕೇಂದ್ರ ಸರ್ಕಾರದ ನೆರವಿನಿಂದ ಸ್ಥಾಪಿಸಲು ಉದ್ದೇಶಿಸಲಾಗಿದೆ. ಡಾಟಾ ಸೆಂಟರನ್ನು ಸ್ಥಾಪಿಸುವ ತನಕ ತಾಲ್ಲೂಕು ಸರ್ವರಗಳಿಗೆ ದೂರವಾಣಿ ಲೈನ್ ಮೂಲಕ ಕಿಯಾಸ್ಕ್ ಮಾಲೀಕರುಗಳಿಗೆ ಸಂಪರ್ಕವನ್ನು ಕಲ್ಪಿಸಲಾಗುವುದು.

ಪುರಸಭಾ ವ್ಯಾಪ್ತಿಯೊಳಗಿನ ಅಕ್ರಮ-ಸಕ್ರಮ ಯೋಜನೆ

2455 (2708) : ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪುರಸಭಾ ವ್ಯಾಪ್ತಿಯ 5 ಕಿಲೋಮೀಟರ್ ಗಡಿಯೊಳಗಿನ ಅರ್ಜಿಗಳನ್ನು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಮಂಜೂರು ಮಾಡಲು ಅವಕಾಶ ಇದೆಯೇ;

ಆ) ಅವಕಾಶ ಇಲ್ಲವಾದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಇಲ್ಲ.

ಆ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94 ಎ (4)ರ 2ನೇ ಪರಂತುಕದ ಪಟ್ಟಿಯನ್ವಯ ಪುರಸಭಾ ವ್ಯಾಪ್ತಿಯ 5 ಕಿ.ಮೀಟರ್ ಗಡಿಯೊಳಗಿನ ಅನಧಿಕೃತ ಸಾಗುವಳಿ ಜಮೀನುಗಳನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಕೇಂದ್ರೀಯ ರಸ್ತೆ ನಿಧಿಯಿಂದ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಪಡಿಸಿದ ರಸ್ತೆಗಳ ವಿವರ

2456 (2709) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರೀಯ ರಸ್ತೆ ನಿಧಿಯಿಂದ 1999--2000 ನಂತರ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಪಡಿಸಿದ ರಸ್ತೆಗಳ ವಿವರ ಹಾಗೂ ಖರ್ಚು ಮಾಡಿದ ಮೊತ್ತವೆಷ್ಟು;

ಆ) ಬಾಕಿ ಉಳಿದಿರುವ ರಸ್ತೆಗಳ ಅಭಿವೃದ್ಧಿಯ ವಿವರ ಹಾಗೂ ಅದಕ್ಕಾಗಿ ಮಂಜೂರಾದ ಮೊತ್ತವೆಷ್ಟು;

ಇ) ಆ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಕೇಂದ್ರ ರಸ್ತೆ ನಿಧಿಯಿಂದ 1999–2000ರ ನಂತರ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಬ್ರಹ್ಮಾವರ–ಸೀತಾನದಿ ಜಿಲ್ಲಾ ಮುಖ್ಯ ರಸ್ತೆಯ ಕಿಮೀ 10.50 ರಿಂದ 15.00 ಕಿಮೀ ವರೆಗೆ ಹಾಗೂ 18.50 ಕಿಮೀ ನಿಂದ 24.00 ಕಿಮೀ ವರೆಗೆ ಒಟ್ಟು 10.00 ಕಿಮೀ ಉದ್ದದ ರಸ್ತೆಯನ್ನು ರೂ. 60.00 ಲಕ್ಷ ವೆಚ್ಚದಲ್ಲಿ ಡಾಂಬರೀಕರಣ ಮಾಡಿ ಕಾಮಗಾರಿ ಸಂಪೂರ್ಣ ಗೊಳಿಸಲಾಗಿದೆ.

ಆ) ಬಾಕಿ ಉಳಿದ ರಸ್ತೆಗಳ ಅಭಿವೃದ್ಧಿಗೆ ಕೇಂದ್ರ ರಸ್ತೆ ನಿಧಿಯಿಂದ ಯಾವುದೇ ಅನುಮೋದನೆ ದೊರಕಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಬಾಕಿ ಇರುವ ಅಕ್ರಮ–ಸಕ್ರಮ ಕಡತಗಳು

2457 (2710) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಇರುವ ಅಕ್ರಮ–ಸಕ್ರಮ ಕಡತಗಳು ಎಷ್ಟು;

ಆ) ಕೋಟಾ ಮತ್ತು ಬ್ರಹ್ಮಾವರ ಹೋಬಳಿಯಲ್ಲಿ ಬಾಕಿ ಇರುವ ಕಡತಗಳ ವಿವರ ನೀಡುವುದು;

ಇ) ಅವುಗಳು ಯಾವ ಹಂತದಲ್ಲಿ ಇವೆ;

ಈ) ಕಡತಗಳನ್ನು ಅಕ್ರಮ–ಸಕ್ರಮ ಸಮಿತಿಯ ಮುಂದೆ ಸಲ್ಲಿಸಲು ವಿಳಂಬವಾಗಲು ಕಾರಣವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ನಮೂನೆ–50	ನಮೂನೆ–53
852	7894